ಮೊದಲು ಕಿತ್ತುಹೋಗಿರುವ ಮಧ್ಯದ ಮೆಟ್ಟಿಲನ್ನು ಒಡೆದುಹಾಕಬೇಕು. ಮತ್ತೆ ಕಟ್ಟುವುದಕ್ಕೆ ಎಷ್ಟು ಇಟ್ಟಿಗೆ ಬೇಕಾಗಬಹುದು? ಹೆಚ್ಚೆಂದರೆ ಎಂಟು– ಹತ್ತು ಇಟ್ಟಿಗೆ. ಒಂದರ್ಧ ಚೀಲ ಮರಳು, ಸಿಮೆಂಟು. ಅಷ್ಟನ್ನು ತನ್ನ ಸೈಕಲಿಗೆ ಕಟ್ಟಿಕೊಂಡು ತರುವುದೇನೂ ಕಷ್ಟವಲ್ಲ.

ಒಂದು ಬಯಲಿನಲ್ಲಿ ಆಕಾಶದೊಂದು ತುಣುಕೇ ಬಂದು ಕೂತಂತೆ ಕಾಣಿಸುತ್ತಿದ್ದ ತಿಳಿನೀಲಿ ಬಣ್ಣದ ಸರ್ಕಸ್ ಟೆಂಟು ಅದೇನೋ ಹೊಟ್ಟೆಕಿಚ್ಚಿನಿಂದ ಬೀಸಿಬಂದ ಗಾಳಿಗೆ ನಾಲ್ಕಾರು ಬಾರಿ ಅಲ್ಲಾಡಿತು. ಮಾರು ದೂರದ ಮಸೀದಿಯೊಂದರಿಂದ ಆಜಾನ್ ಕೇಳತೊಡಗಿತು. ಎದುರು ದಿಕ್ಕಿನಿಂದ ಬರುತ್ತಿದ್ದ ಜನ ತಮ್ಮತಮ್ಮಲ್ಲೇ ಮುಳುಗಿಹೋದಂತಿದ್ದರೂ ಅವನನ್ನು ಸಂಪೂರ್ಣವಾಗಿ ಗಮನಿಸದಿರಲಿಲ್ಲ. ಬೀದಿಯ ಪ್ರಾರಂಭದಲ್ಲೇ ಸಣ್ಣ ಹುಡುಗರ ಒಂದು ಗುಂಪಿಗೆ ಗುಂಪೇ ಅವನನ್ನು ಗುರುತಿಸಿಬಿಟ್ಟಂತೆ ತೋರಿದಾಗ ಅವನಿಗೆ ಹಿಂದೆಂದೋ ಪತ್ರಿಕೆಯಲ್ಲಿ ಒಂದು ಫೋಟೋ ಜೊತೆ ತಾನು ನೋಡಿದ್ದ 'ಬೇಕಾಗಿದ್ದಾರೆ!' ಎಂಬ ಜಾಹೀರಾತು ನೆನಪಾಯಿತು. ಒಂದಿಬ್ಬರು ಹುಡುಗರು ಹತ್ತಿರ ಬಂದಂತೆ ಅವನನ್ನು ನೋಡಿ ನಕ್ಕರು. ಮರುಕ್ಷಣ ಏನೋ ತಪ್ಪಾಯಿತೆನ್ನುವಂತೆ ಮುಖ ತಿರುಗಿಸಿಕೊಂಡರು. ತಾನೇನಾದರೂ ಪುಡಾರಿಯೋ ಸಿನಿಮಾ ನಟನೋ ಆಗಿದ್ದಿದ್ದರೆ ಹೀಗಾಗುತ್ತಿತ್ತೇ ಎಂದುಕೊಂಡ. ಅಲ್ಲೇ ಒಂದು ಬದಿಗೆ ನಿಲ್ಲಿಸಿದ್ದ ದೊಡ್ಡದೊಂದು ಹೋರ್ಡಿಂಗಿನಲ್ಲಿ ಜೋಗ್ ಜಲಪಾತ ಅಬ್ಬರಿಸುತ್ತಿತ್ತು.

ಬಹುಬೇಗ ಆ ರಸ್ತೆ ಒಂದು ಹೆದ್ದಾರಿಗೆ ಕರೆದೊಯ್ದಿತು. ಅಲ್ಲೊಂದು ಮೂಲೆಯಲ್ಲಿ ಗೋವರ್ಧನ ಮಾಲ್. ಅದರ ಬಳಿ ನೆಲದ ಮೇಲೆ ಕೈಚಾಚಿಕೊಂಡು ಕೂತಿದ್ದ ಭಿಕ್ಷುಕರು ತಮ್ಮ ದುರದೃಷ್ಟಕ್ಕೆ ಕಾರಣರಾದವರನ್ನು ಹುಡುಕುತ್ತಿದ್ದಂತಿತ್ತು. ಅಂಗಡಿಗಳ ಮುಂದೆ ಗಿರಾಕಿಗಳನ್ನು ಕರೆಯುತ್ತ ನಿಂತಿದ್ದ ಆಳೆತ್ತರದ ಗೊಂಬೆಗಳು ನಿಜವಾದ ಮನುಷ್ಯರಂತೆ ಹಲ್ಲು ಕಿರಿಯುತ್ತಿದ್ದವು. ಅವುಗಳ ಪಕ್ಕದಲ್ಲಿ ಕಬ್ಬಿಣದೊಂದು ಬೆಂಚಿನ ಮೇಲೆ ಐಸ್‌ಕ್ರೀಮ್ ತಿನ್ನುತ್ತ ಕೂತಿದ್ದ ಹುಡುಗಿಯರಿಬ್ಬರು ಹರಕಲು ಬಟ್ಟೆಯ, ತಲೆಕೆದರಿದ ಮುದುಕನೊಬ್ಬ ತನಗೆ ತಾನೇ ಏನೋ ಮಾತಾಡಿಕೊಳ್ಳುತ್ತ ಬಂದು ಕೂತದ್ದೇ ಹಾವು ಕಡಿದವರಂತೆ ಅಲ್ಲಿಂದೆದ್ದು ಓಡಿದರು. ಆಗ ಜೀವನದ ವಿನ್ಯಾಸವೊಂದು ಕಂಡಂತಾಗಿ ಅವನ ಕಣ್ಣು ಹನಿಗೂಡಿತು.

ಯಾರೂ ಸ್ವಾಗತಿಸದ ಬೀದಿಗಳು ಅವನ ಸ್ವಚ್ಛಂದ ಮನಃಸ್ಥಿತಿಗೆ ಸಾಟಿಯಾಗಿರಲಿಲ್ಲ. ಅವನು ಮುಂದೆ ಮುಂದೆ ಹೋಗುತ್ತಿರುವಾಗ ಕಳೆದ ಕೆಲವು ದಿನಗಳಲ್ಲಿ ತಾನು ನಾಲ್ಕಾರು ಬಾರಿ ಓಡಾಡಿದ್ದ ಇದೇ ರಸ್ತೆಯಲ್ಲಿ ಏನೆಲ್ಲಾ ಕಂಡಿದ್ದೆ ಎಂದು ನೆನಪು ಮಾಡಿಕೊಳ್ಳತೊಡಗಿದ. ಕಿವಿ ಗಡಚಿಕ್ಕುವಂತೆ ಸದ್ದು ಮಾಡಿದ ಒಂದು ಆಂಬುಲೆನ್ಸ್ ಬಂದ ಹಾಗೆಯೇ ಹೊರಟುಹೋಯಿತು.

ಮಾರನೆಯ ದಿನ ಅವನು ತುಳಿಯತೊಡಗಿದ ಇನ್ನೊಂದು ಬೀದಿ ರೈಲ್ವೇ ಸ್ಟೇಷನ್ನಿಗೆ ಕರೆದುಕೊಂಡು ಹೋಯಿತು. ಸದ್ಯದಲ್ಲೇ ರೈಲೊಂದು ಬರಲಿತ್ತೋ ಏನೋ, ಪ್ಲಾಟ್‌ಫಾರ್ಮಿನ ಮೇಲೆ ಜನವೋ ಜನ. ಅವನು ಅವರ ಮಧ್ಯೆಯೇ ಜಾಗ ಮಾಡಿಕೊಂಡು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಮೂರು ನಾಲ್ಕು ಬಾರಿ ತಿರುಗಾಡಿದಾಗ ಅಲ್ಲೊಂದು ಬೆಂಚಿನ ಮೇಲೆ ಚಾಕಲೇಟು ತಿನ್ನುತ್ತ ಕೂತಿದ್ದ ಆ ಮಗುವನ್ನು ನೋಡಿ ಒಂದು ಕ್ಷಣ ದಂಗಾದ. ಮಗುವಿನ ಒಂದು ಪಕ್ಕದಲ್ಲಿ ಅದೇ ಹೆಂಗಸು. ಇನ್ನೊಂದು ಪಕ್ಕದಲ್ಲಿ ಕೂತುಕೊಂಡು ಅದರ ತಲೆ ನೇವರಿಸುತ್ತಿದ್ದವನು ಆಕೆಯ ಗಂಡನಿರಬೇಕು. ಒಂದೆರಡು ಕ್ಷಣಗಳಲ್ಲೇ ರೈಲು ಬಂದು ನಿಂತದ್ದೇ ಜನ ತಮ್ಮ ತಮ್ಮ ಸಾಮಾನು ಸರಂಜಾಮುಗಳನ್ನು ಎತ್ತಿಕೊಂಡು ಹೇಗೆ ಮುಗಿಬಿದ್ದರೆಂದರೆ ಅವನಿಗೆ ಆ ಮಗು, ಅದರ ಅಪ್ಪ ಅಮ್ಮ ಯಾವ ಬೋಗಿ ಹತ್ತಿದರೆಂದು ಗೊತ್ತಾಗಲಿಲ್ಲ. ಅದು ಹುಬ್ಬಳ್ಳಿಗೆ ಹೊರಟಿದ್ದ ರೈಲು.

ಅವತ್ತು ಚಂದ್ರನಿಲ್ಲದಿದ್ದರೂ ಅಷ್ಟೇನೂ ಕತ್ತಲಿರದ ರಾತ್ರಿ. ಅವನು ದೇವೇಂದ್ರನ ಜೊತೆ ಮಲ್ಲಿಗೆ ಥಿಯೇಟರಿನಲ್ಲಿ ಅಣ್ಣಾವ್ರ 'ಹುಲಿಯ ಹಾಲಿನ ಮೇವು' ಸಿನಿಮಾ ನೋಡಿದ. ದೇವೇಂದ್ರ ತನಗೆ ಬೇರೆ ಕೆಲಸವಿದೆಯೆಂದು ಹೊರಟುಹೋದ ಮೇಲೆ ಏನು ಮಾಡುವುದೆಂದು ತಿಳಿಯದೆ ಸುಮ್ಮನೆ ಬೀದಿಗಿಳಿದ. ಯಾರ ಕಣ್ಣಿಗೂ ಅವನು ಕಾಣದಷ್ಟು ಕತ್ತಲು. ಆ ಬೀದಿ ತನ್ನ ಊರಿನ ಬೀದಿಗಳಷ್ಟೇ ಪರಿಚಿತವಾಗಿದ್ದರಿಂದ ಗೋಡೆಗಳನ್ನು, ಬೇಲಿಗಳನ್ನು ದಾಟುತ್ತ ಮುಂದೆ